ENCROACHMENT OF AGRICULTURAL LAND 1-1-1988

| Sl. No. | Name of the District | Total No. of persons. SC/S.T. | Total extent in acres & guntas. |
|---|---|---|---|
| 1 | Bangalore (Rural) | 7285 | 10387.35 |
| 2 | Bangalore (Uraban) | 2610 | 4007.16 |
| 3 | Belgaum | 53 | 133.15 |
| 4 | Bellary | 5349 | 11734.35 |
| 5 | Bidar | 1700 | 5282.01 |
| 6 | Bijapur | 284 | 813.00 |
| 7 | Chikkamagalore | 4432 | 10805.05 |
| 8 | Chitradurga | 10448 | 22585.34 |
| 9 | Dakshina Kannada | 4712 | 4325.16 |
| 10 | Dharwad | 1110 | 2665.23 |
| 11 | Gulbarga | 3334 | 9271.00 |
| 12 | Hassan | 8510 | 17021.38 |
| 13 | Kodagu | 314 | 300.21 |
| 14 | Kolar | 16238 | 32338.34 |
| 15 | Mandya | 2312 | 3017.30 |
| 16 | Mysore | 5200 | 11659.40 |
| 17 | Raichur | 1850 | 5545.22 |
| 18 | Shimoga | 4565 | 9156.32 |
| 19 | Tumkur | 12342 | 23785.35 |
| 20 | Uttara Kannada | 88 | 229.15 |
| | Total | 92736 | 184568.07 |

## ಸರ್ಕಾರ ರಚಿಸಿರುವ ವಿಚಾರಣಾ ಆಯೋಗಗಳು

೧೫. ಶ್ರೀ ಜಿ. ರಾಜೂಗೌಡ (ಹನೂರು).—ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧-೪-೧೯೮೭ ರಿಂದ ೩೧-೧೨-೧೯೮೯ರ ಅವಧಿಯಲ್ಲಿ ಸರ್ಕಾರದವರು ಯಾವ ಯಾವ ವಿಷಯಗಳ ವಿಚಾರಣೆಗಾಗಿ ಆಯೋಗಗಳನ್ನು ರಚಿಸಿದೆ.

ಆ) ಅವುಗಳಲ್ಲಿ ಎಷ್ಟು ಆಯೋಗಗಳು ಸರ್ಕಾರಕ್ಕೆ ಇದುವರೆವಿಗೆ ವರದಿ ಸಲ್ಲಿಸಿವೆ

ಇ) ವಿಚಾರಣಾ ಆಯೋಗಗಳ ವರದಿಯ ಮೇರೆಗೆ ತಪ್ಪಿತಸ್ಥರೆಂದು ತೀರ್ಮಾನಿಸಲಾದ ಅಧಿಕಾರಿಗಳ ಸಂಖ್ಯೆ ಎಷ್ಟು ? ಹಾಗೂ ಇನ್ನಿತರ ಸಂಖ್ಯೆ ಎಷ್ಟು ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿ).—

ಅ) ೭ ಆಯೋಗಗಳನ್ನು ರಚಿಸಿದೆ.

೧) ಪಿ. ಕೆ. ಶ್ಯಾಮಸುಂದರ್ ಆಯೋಗ:—೧೯೮೮ರ ಸೆಪ್ಟೆಂಬರ್‌ನಲ್ಲಿ ಬೀದರ್‌ನಲ್ಲಿ ಸಿಖ್ ವಿದ್ಯಾರ್ಥಿಗಳ ಮತ್ತು ಇನ್ನಿತರರ ನಡುವೆ ನಡೆದ ಘರ್ಷಣೆಯ ಬಗ್ಗೆ ತನಿಖೆ ನಡೆಸಲು (೨೬–೧೦–೮೮ ರಂದು ರಚಿಸಲಾಗಿದೆ)

೨) ಎಂ. ಬಿ. ವಿಶ್ವನಾಥ್ ಆಯೋಗ:— ೧೯೮೭ರ ಜನವರಿಯಲ್ಲಿ ಗುರುಮಿಠ್‌ಕಲ್‌ನಲ್ಲಿ ನಡೆದ ಪೋಲೀಸ್ ದೌರ್ಜನ್ಯದ ಬಗ್ಗೆ, ತನಿಖೆ ನಡೆಸಲು (೧೯–೨–೧೯೮೮ ರಂದು ರಚಿಸಲಾಗಿದೆ)

೩) ಬಿ. ಕೆ. ಸೋಮಶೇಖರ್ ಆಯೋಗ:— ೧೯೮೭ರ ಫೆಬ್ರುವರಿಯಲ್ಲಿ ಗುಜುನೂರಿನಲ್ಲಿ ಶುಶ್ರೂಷಕಿಯಾಗಿದ್ದ ಶ್ರೀಮತಿ ಪದ್ಮಮ್ಮ ಮಂತ್ರಿ ಅವರ ಪತಿ ಶ್ರೀ ನಾರಾಯಣ ಸ್ವಾಮಿ ಅವರ ಮೇಲೆ ಅಲ್ಲಿನ ಪೊಲೀಸರು ನಡೆಸಿದರೆನ್ನಲಾದ ಹಲ್ಲೆ ಬಗ್ಗೆ ಮತ್ತು ತತ್‌ಸಂಬಂಧವಾಗಿ ಪಾವಗಡದಲ್ಲಿ ನಡೆದ ಪೋಲೀಸ್ ಗೋಲೀಬಾರ್ ಬಗ್ಗೆ ತನಿಖೆ ನಡೆಸಲು (೨೦–೬–೧೯೮೭ ರಂದು ರಚಿಸಲಾಗಿದೆ)

೪) ಮಂಗಳೇಧಂ ರಾವ್ ಆಯೋಗ:— ೧೭–೧೨–೮೬ರ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಪ್ರಕಟವಾದ ಸಣ್ಣ ಕತೆಯೊಂದರ ಪ್ರಕಟಣೆಯ ವಿರುದ್ಧ, ಬೆಂಗಳೂರು ಮೈಸೂರು ಮತ್ತು ತುಮಕೂರಿನಲ್ಲಿ ಪ್ರತಿಭಟನೆ ನಡೆಸಿದವರ ವಿರುದ್ಧ ಪೋಲೀಸರು ಗೋಲೀಬಾರ್ ಮಾಡಿ ಕೆಲವು ವ್ಯಕ್ತಿಗಳು ಮೃತರಾಗಿ ಹಲವರು ಗಾಯಗೊಂಡರು ಈ ಘಟನೆಗಳ ಬಗ್ಗೆ ತನಿಖೆ ನಡೆಸಲು (೪–೨–೧೯೮೭ ರಂದು ರಚಿಸಲಾಗಿದೆ)

೫) ಪರಮೇಶ್ವರ ದಯಾಳ್ ಆಯೋಗ:—ಶ್ರೀಮತಿ ಸುಧಾ ಎಂಬುವವರಿಗೆ ಬೆಳಗಾಂ ಮೆಡಿಕಲ್ ಕಾಲೇಜಿನಲ್ಲಿ ಸೀಟು ಕೊಡಿಸುವ ಆಶ್ವಾಸನೆ ಕೊಟ್ಟು ಅವರಿಂದ ಹಣ ತೆಗೆದುಕೊಂಡು ಶ್ರೀ ಭರತ್ ಹೆಗ್ಗಡೆಯವರು ಅವರಿಗೆ ಮೋಸ ಮಾಡಿದರು ಎಂಬ ಆಪಾದನೆ ಬಗ್ಗೆ ತನಿಖೆ ನಡೆಸಲು (೨೦–೭–೮೯ ರಂದು ರಚಿಸಲಾಗಿದೆ)

೬) ಎಂ. ಬಿ. ವಿಶ್ವನಾಥ್ ಆಯೋಗ:— ೧೯೮೯ರ ಜನವರಿಯಲ್ಲಿ ಚಿಂಚೋಳಿಯಲ್ಲಿ ಪರಿಶಿಷ್ಟ ವರ್ಗಕ್ಕೆ ಸೇರಿದ ಕೆಲವು ವ್ಯಕ್ತಿಗಳು ಮಂತ್ತು ಇತರರ ನಡುವೆ ಘರ್ಷಣೆ ನಡೆದು ಪೋಲೀಸರು ಗೋಲೀಬಾರ್ ಮಾಡಿದ ಪ್ರಕರಣದ ಬಗ್ಗೆ ತನಿಖೆ ನಡೆಸಲು (೨೯–೬–೮೯ ರಂದು ರಚಿಸಲಾಗಿದೆ)

೭) ವಕ್ಫ್ ವಿಚಾರಣಾ ಆಯೋಗ:— ರಾಜ್ಯದಲ್ಲಿನ ವಕ್ಫ್ ಆಸ್ತಿ ಪಾಸ್ತಿಗಳ ದುರುಪಯೋಗದ ಬಗ್ಗೆ ತನಿಖೆ ನಡೆಸಲು. (೨೫–೬–೮೮ ರಂದು ರಚಿಸಲಾಗಿದೆ)

ಆ) 2.

ಇ) ೧) ಪಿ. ಕೆ. ಶ್ಯಾಮಸುಂದರ್ ತನಿಖಾ ಆಯೋಗ ೨೯–೩–೧೯೯೦ ರಂದು ತನ್ನ ವರದಿಯನ್ನು ಸಲ್ಲಿಸಿದೆ. ಇದು ಇನ್ನೂ ಸರ್ಕಾರದ ಪರಿಶೀಲನೆಯಲ್ಲಿ ಇದೆ. ಆದ್ದರಿಂದ ಯಾವ ಅಧಿಕಾರಿಗಳನ್ನು ತಪ್ಪಿತಸ್ಥರೆಂದು ತೀರ್ಮಾನಿಸಲಾಗಿದೆ ಯಾರನ್ನು ಹಾಗೆ ತೀರ್ಮಾನಿಸಲಾಗಿಲ್ಲವೆಂದು ಈಗಲೇ ತಿಳಿಸುವುದಕ್ಕಾಗುವುದಿಲ್ಲ.

೨) ವಕ್ಫ್ ಆಯೋಗದ ಅಧ್ಯಕ್ಷರು ವರದಿಯನ್ನು ಸಲ್ಲಿಸಿದ್ದಾರೆ. ಆದರೆ ಆಯೋಗದ ಇನ್ನೂ ಇಬ್ಬರು ಸದಸ್ಯರು ಈ ವರದಿಯನ್ನು ಅನುಮೋದಿಸಿಲ್ಲವಾದುದರಿಂದ ಈ ವರದಿಯನ್ನು ಸರ್ಕಾರವು ತಿರಸ್ಕರಿಸಿದೆ. ಸರ್ಕಾರವು ಈ ವರದಿಯನ್ನು ತಿರಸ್ಕರಿಸಿರುವುದರಿಂದ ಯಾವ ಅಧಿಕಾರಿಗಳನ್ನು ತಪ್ಪಿತಸ್ಥರೆಂದು ತೀರ್ಮಾನಿಸಲಾಗದೆ ಯಾರನ್ನು ಹಾಗೆ ತೀರ್ಮಾನಿಸಲಾಗಿಲ್ಲವೆಂದು ಸೂಚಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.